# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ
## ಸಿ.ಸಿಃ 1643/2022

ಪ್ರಾಸಾ-1, ಚಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಯ್ಯ |
| ತಂದೆಯ ಹೆಸರು | : | ಲೇಟ್ ಆರ್ ಲಿಂಗನಾಯಕ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಉಪ ನಿರೀಕ್ಷಕರು |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕಃ 20.06.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿಃ01.07.2021 ರಿಂದ 01.01.2022 ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ PSI ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 08.06.2021ರಂದು ಸಂಜೆ 5.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಠಾಣಾ ಸರಹದ್ದು ಬೋಗಾಪುರದ ಹತ್ತಿರ ಒಬ್ಬ ಆಸಾಮಿಯು Spendor ಬೈಕಿನಲ್ಲಿ ಅಕ್ರಮವಾಗಿ ಮದ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಸಾಗಾಣಿಕೆ ಮಾಡುತ್ತಾನೆ ಬಾಥ್ಮಿತೀದಾರಧಿರಿಂದ ಮಹಿತಿ ಬಂದು ಕೂಡಲೇ ಚಾಸಾ-4 ರಿಂದ 6 ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಹೊರಟು ಮಾರ್ಗ ಮಧ್ಯೆ ಚಾಸಾ-2 ಮತ್ತು 3 ಪಂಚರನ್ನು ಕರೆದುಕೊಂಡು ಮಾಹಿತಿ ವಿಚಾರ ತಿಳಿಸಿ ದಾಳಿ ಕಾಲದಲ್ಲಿ ಪಂಚರಾಗಿ ನಮ್ಮ ಜೊತೆಗ ಸಹಕರಿಸಲು ಕೋರಿಕೊಂಡ ಮೇರೆಗೆ ಒಪ್ಪಿದ್ದು ನಂತರ ಅವರನ್ನು ನಮ್ಮ ಜೊತೆಯಲ್ಲಿ ಕರೆದುಕೊಂಡು ಜೀಪಿನಲ್ಲಿ ಹೊರಟು ಸಂಃ 5.20 ಗಂಟೆಗೆ ಭೋಗಾಪುರ ಗ್ರಾಮದ ಗ್ರಾಮ ಪಂಚಾಯತಿ ಬಳಿ ಹೋಗಿ ಪಂಚಾಯಿತಿಯ ಹಿಬಂದಿಯಲ್ಲಿ ಜೀಪನ್ನು ಮರೆಯಾಗಿ ನಿಲ್ಲಿಸಿ ಎಲ್ಲರು ಜೀಪಿನಿಂದ ಇಳಿದು ಪಂಚಾಯಿತಿ ಮುಂಭಾಗದ ರಸ್ತೆಯ ಅಂಚಿನಲ್ಲಿ ಕಾಯುತ್ತಿದ್ದಾಗ ಸಂಃ5.30 ಗಂಟೆ ಸಮಯದಲ್ಲಿ ಭೋಗಾಪುರ ಬಸ್ ನಿಲ್ದಾಣದಿಂದ ಭೋಗಾಪುರ ಗ್ರಾಮದ ಕಡೆಗೆ ಒಬ್ಬ

ಆಸಾಮಿಯು ಒಂದು ಹಿರೋ Splendor ಬೈಕಿನ ಟ್ಯಾಂಕಿನ ಮೇಲೆ ಒಂದು ಕಪ್ಪು ಬಣ್ಣದ ಬ್ಯಾಗಳನ್ನು ಇಟ್ಟುಕೊಂಡು ಬರುತ್ತಿದ್ದು, ನಮಗೆ ಆತನ ಮೇಲೆ ಅನುಮಾನ ಬಂದು, ಕೂಡಲೇ ರಸ್ತೆಯಲ್ಲಿ ಅಡ್ಡಗಟ್ಟಿ ಆಸಾಮಿಯ ಮೋಟಾರ್ ಬೈಕನಿಂದ ತಡೆದು ನಿಲ್ಲಿಸಿ ಆತನ ಹೆಸರು ವಿಳಾಸವನ್ನು ಕೇಳಲಾಗಿ ಮಹದೇವಯ್ಯ ಬಿನ್ ಲೇಟ್ ಬಸವಲಿಂಗಯ್ಯ ಚಾಟೀಪುರ ಗ್ರಾಮ ಎಂದು ತಿಳಿಸಿದ್ದು, ನಂತರ ಕಪ್ಪು ಬಣ್ಣದ ಸ್ಕೂಲ್ ತೆಗೆಯಿಸಿ ನೋಡಲಾಗಿ ಬ್ಯಾಗಿನ ಒಳಗೆ ಮದ್ಯ ಟೆಟ್ರಾ ಪ್ಯಾಕ್ ಗಳಿರುವುದು ಕಂಡುಬಂದಾಗ ಆಸಾಮಿಯ ಟೆಟ್ರಾ ಪ್ಯಾಕ ಗಳನ್ನು ವಶದಲ್ಲಿ ಇಟ್ಟುಕೊಂಡು ಸಾಗಾಣಿಕೆ ಮಾಡಲು ಯಾವುದಾದರೂ ಪರವಾನಿಗೆ ಇದೆ ಎಂದು ಕೇಳಲಾಗಿ ಯಾವುದು ಇರುವುದಿಲ್ಲ ಇವುಗಳನುನ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿರುವುದಾಗಿ ತಿಳಿಸಿದ ಮೇರೆಗೆ ಪಂಚರ ಸಮಕ್ಷಮ ಬ್ಯಾಗ್ ಅನ್ನು ಪರಶೀಲಿಸಲಾಗಿ ಬ್ಯಾಗಿನ ಒಳಗೆ 90 MLನ ಹೈವಾರ್ಡ್ ಚೀರ ವಿಸ್ಕೀಯ 60 ಟೆಟ್ರಾ ಪೌಚ್ ಗಳಿದ್ದು, ಸುಮಾರು 5.4ಲೀ ಮದ್ಯ ಇರುತ್ತದೆ. ಇದರ ಬೆಲೆ ಸುಮಾರು 2,102ರೂ ಆಗಿರುತ್ತದೆ. ಮೋಟಾರ್ ಸೈಕಲ್ ಅನ್ನು ಪರಿಶೀಲಿಸಲಾಗಿ KA-02-EB-6946 Hero splendor plus ಮೋಟಾರ್ ಸೈಕಲ್ ಆಗಿರುತ್ತದೆ. 60 ಮದ್ಯದ ಟೆಟ್ರಾ ಪ್ಯಾಕ್ ಗಳ ಪೈಕಿ ರಾಸಾಯನಿಕ ಪರಿಶೀಲನೆಗಾಗಿ 30 ಟೆಟ್ರಾ ಪ್ಯಾಕ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಮೊಹರು ಮಾಡಲಾಗಿ ಕ್ಯೂ ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. ನಂತರ ಆರೋಪಿ ಸಂ 5.45 ರಿಂದ 6.30ರವರೆಗೆ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡು ಸಂಃ 6.45 ಗಂಟೆಗೆ ಆಸಾಮಿಯನ್ನು ಮಾಲು ಸಮೇತ ಠಾಣೆಗೆ ತಂದು ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿ, ಸ್ವ-ವರದಿಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸ್ವ ವರದಿಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 30 ಸ್ಯಾಂಪಲ್ ಟೆಟ್ರಾ ಪ್ಯಾಕ್ ಗಳನ್ನು ಹಾಗೂ ಕಪ್ಪು ಬಣ್ಣದ ಸ್ಕೂಲ್ ಬ್ಯಾಗ್ ಅನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 1 ಮತ್ತು 2 ಎಂದು

ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**ಪಾಟೀಸವಾಲುಃ ಶ್ರೀ ಆರ್.ಸಿ.ಎಸ್ ವಕೀಲರಿಂದಃ**

ಮಾಹಿತಿ ಬಂದಾಗ ನಾನು ಠಾಣೆಯಲ್ಲಿ ಇದ್ದೆ. ನಮ್ಮ ಸಿಬ್ಬಂದಿಯವರು ಸೇರಿ ಒಟ್ಟ ನಾಲ್ಕು ಜನ ಸೇರಿ ಇಲಾಖಾ ವಾಹನದಲ್ಲಿ ಹೋಗಿದ್ದೇವೆ. KA-10-G-487 ಅದನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. 5.30 ಗಂಟೆ ಸಮಯವು ಜನರು ಓಡಾಡುವ ಸಮಯ. ಸಮಾರು ಜನ ಓಡಾಡುತ್ತಿದ್ದರು ಯಾರು ಎಂದು ಗೊತ್ತಿಲ್ಲ. ಆರೋಪಿಯನ್ನು ನಾನೇ ನೋಡಿರುತ್ತೇನೆ. ಮೂರು ಜನ ಸೇರಿ ಹಿಡಿದಿರುತ್ತೇವೆ. Splendor ಬೈಕನ್ನು ಐ.ಓ ವಿಚಾರಣೆ ಮಾಡಿರುತ್ತಾರೆ. ಸಾಕ್ಷಿದಾರರಿಗೆ ನೋಟಿಸ್ ಕೊಟ್ಟಿ ಕರೆಸಿರುತ್ತೇವೆ. ನೋಟಿಸ್ ಕಾಪ ಹಾಜರುಪಡಿಸಿಲ್ಲ. ಸಾಕ್ಷಿದಾರರು ಗ್ರಾಮದವರು ಅಲ್ಲ. ದಾರಿಯಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಸ್ಯಾಂಪಲ್ ಗಳನ್ನು ಮಾತ್ರ ಪರಿಶೀಲನೆಗಾಗಿ ಕಳುಹಿಸುತ್ತೇನೆ. ಲೇಬಲ್ ನಂ. ದಿನಾಂಕ ಎಲ್ಲ ಟೆಟ್ರಾ ಪ್ಯಾಕ್ ಗಳ ಮೇಲೆ ಇರುತ್ತವೆ ಎಂದರೆ ಸರಿ. ಅಬಕಾರಿ ಕಮೀಷನರ್ ನ ಸೀಲ್ ನ ಸ್ಟಿಕರ್ ಅದರ ಮೇಲಿನ MRP ಅನ್ನು ಬರೆದಿರುತ್ತೇನೆ ಉಳಿದ ಮಾಹಿತಿ ಬರೆದಿಲ್ಲ. ಕುಮಾರ್ ಸ್ವಾಮಿ ಎಂಬ ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ಮಹಜರ್ ಅನ್ನು ಠಾಣೆಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸ್ಥಳ ಹೋಗಿಲ್ಲ ಪಂಚನಾಮೆಯನ್ನು ಆರೋಪಿ ಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆಮಾಲುಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕಿಅಂಶಗಳನ್ನು ಸುಳ್ಳು ದೂರು ದಾಖಲೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.